XSL/SE/2022-23/25 August 8, 2022

The Secretary
Listing Department
BSE Limited
PJ Towers,
Dalal Street,
Mumbai - 400 001
Script Code: 532616

The Secretary
Listing Department
National Stock Exchange of India Limited
Exchange Plaza, 5th Floor,
Plot No. C/1, G Block, Bandra Kurla
Complex, Bandra (East), Mumbai 400051
Script Code: XCHANGING

**Sub: Newspaper advertisement pertaining to financial results of Q1 FY 2022-23**

Dear Sir/Madam,

Pursuant to Regulation 47 of the SEBI (Listing Obligations and Disclosure Requirements) Regulations, 2015 as amended, please find enclosed copies of the newspaper advertisement pertaining to financial results of the Company for the quarter ended June 30, 2022. The advertisements were published in Financial Express (English) and Sanjevani (Kannada language) newspapers.

This information will also be hosted on the Company's website in due course, at https://www.dxc.com/in/en/about-us/xchanging-solutions-limited-investor-relations.

This is for your information and records.

Thanking You,

Yours sincerely,
For Xchanging Solutions Limited

Mayank Jain
Company Secretary cum Compliance Officer
Membership Number: A26620

Address: Kalyani Tech Park - Survey No 1, 6 & 24, Kundanhalli Village, K R Puram Hobli, Bangalore - 560066, Karnataka, India

**Xchanging Solutions Limited, a DXC Technology Company**

CIN: L72200KA2002PLC030072
Registered Office: Kalyani Tech Park - Survey no 1, 6 & 24, Kundanhalli Village, K R Puram Hobli, Bangalore – 560066, Karnataka, India
**T** +91.(0) 80.43640000
**www.dxc.com**

# ಹೋರಾಟದಿಂದ ರಾಜಕೀಯ ಪ್ರಾತಿನಿಧ್ಯ



ಚಿಕ್ಕಬಳ್ಳಾಪುರ,ಆ8:ಪ್ರಖರ ವಾಗ್ಮಿ ಜಿ.ವಿ. ಶ್ರೀರಾಮರೆಡ್ಡಿ ಅವರು ಪ್ರತಿನಿಧಿಸಿದ್ದಂತಹ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಒಕ್ಕಲಿಗ ಸಮುದಾಯ ಸಂಘಟನೆ,ಒಗ್ಗಟ್ಟು ಮತ್ತು ಹೋರಾಟದ ಮೂಲಕ ರಾಜಕೀಯ ಪ್ರಾತಿನಿಧ್ಯಗಿಟ್ಟಿಸಿಕೊಳ್ಳಲು ಮುಂದಾಗಬೇಕು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕರೆ ನೀಡಿದರು.

ಬಾಗೇಪಲ್ಲಿಯಲ್ಲಿ ಆಯೋಜಿಸಿದ್ದ ಕೆಂಪೇಗೌಡ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು,ಶ್ರೀರಾಮರೆಡ್ಡಿ ಗುಡುಗಿದರೆ ಮುಖ್ಯಮಂತ್ರಿಗಳು ನಡುಗುತ್ತಾರೆ ಎಂಬ ಮಾತಿತ್ತು.ಅಂತಹ ನಾಯಕರು ಬಾಗೇಪಲ್ಲಿ ಅಭಿವೃದ್ಧಿಗಾಗಿ ತೀವ್ರವಾಗಿ ಶ್ರಮಿಸಿದ್ದು, ಅವರ ಸ್ಮಾರಕ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಸರ್ಕಾರದಿಂದ ಮಂಜೂರು ಮಾಡಿಸುವುದಾಗಿ ಸಚಿವರು ಭರವಸೆ ನೀಡದರು

ಆಡಳಿತದಲ್ಲಿ ಸಾಮಾಜಿಕ ನ್ಯಾಯ ಒದಗಿಸುವ ಜೊತೆಗೆ ಎಲ್ಲ ಸಮುದಾಯಗಳನ್ನು ಸಮಾನವಾಗಿ ಕಾಣುವ ಉದ್ದೇಶ ಹೊಂದಿದ್ದು, ಈ ಭಾಗದ ದಲಿತ ಸಂಘಟನೆಗಳು ಮಾಡಿರುವ ಮನವಿಗೆ ಸ್ಪಂದಿಸಿ ಶೀಘ್ರದಲ್ಲಿಯೇ ಬಾಗೇಪಲ್ಲಿ ತಾಲೂಕು ಕೇಂದ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಕ್ರಮ ವಹಿಸುವುದಾಗಿ ಸಚಿವರು ಹೇಳಿದರು

ಬೆಂಗಳೂರು ನಿರ್ಮಾತೃ ವಾದ ಕೆಂಪೇಗೌಡರು ನಮ್ಮನ್ನು ಅಗಲಿ 530 ವರ್ಷಗಳೇ ಕಳೆದಿವೆ. ಆದರೆ ಇಂದಿಗೂ ಅವರ ಕಾರ್ಯಕ್ರಮಗಳು ಪ್ರಸ್ತುತವಾಗಿವೆ. ಇಂದಿನ ಆಡಳಿತ ಮತ್ತು ಅವರ ಕಾರ್ಯಗಳು ಅನುಕರಣೀಯವಾಗಿದ್ದು, ಅವರು ನಿರ್ಮಿಸಿದ ಕೆರೆಗಳು ರೈತರ ಅನುಕೂಲದ ದೂರದೃಷ್ಟಿಯನ್ನು ಪ್ರಸುತಪಡಿಸುತ್ತವೆ ಎಂದರು.

ಬಾಗೇಪಲ್ಲಿ ತಾಲೂಕು ಗಡಿ ಪ್ರದೇಶದಲ್ಲಿದ್ದು, ಇಲ್ಲಿ ಒಕ್ಕಲಿಗ ಸಮುದಾಯ ಪ್ರಭಾವಿಯಾಗಿ ಇರುವುದು ಹೆಮ್ಮೆಯ ವಿಚಾರವಾಗಿದೆ. ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರೂ ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದು, ರಾಜ್ಯದ ಆಡಳಿತದ ಬುನಾದಿ ಹಾಕಿದ ಸಮುದಾಯವೆಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದರು.

ಒಕ್ಕಲು ಮಾಡುವ ಎಲ್ಲರೂ ಒಕ್ಕಲಿಗರು

ಒಕ್ಕಲುತನ ಮಾಡುವವರೆಲ್ಲರೂ ಒಕ್ಕಲಿಗರೇ.ಕೃಷಿಮಾಡುವವರೆಲ್ಲರೂ ಭೂತಾಯಿಯ ಮಕ್ಕಳು.ಇಂತಹ ಪವಿತ್ರ ಸಮುದಾಯದಲ್ಲಿ ಹುಟ್ಟಿದ ನಾವು ದೇಶದ ಬೆನ್ನೆಲುಬಾಗಿ,ಅನ್ನದಾತರಾಗಿ ಕೆಲಸ ಮಾಡುತ್ತಿರುವುದಕ್ಕೆ ಹೆಮ್ಮೆ ಪಡಬೇಕು.ನಮ್ಮ ಸಮುದಾಯ ಸಾಮರಸ್ಯಕ್ಕೆ ಪ್ರತೀಕವಾಗಿದ್ದು, ಆ ಕಾಲದಲ್ಲಿಯೇ ಸಾಮಾಜಿಕ ನ್ಯಾಯ ಒದಗಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ.ಹಾಗಾಗಿ ಅವರ ಮಾರ್ಗದಲ್ಲಿಯೇ ಎಲ್ಲರೂ ಸಾಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕೋನಪ್ಪರೆಡ್ಡಿ, ಡಾ.ರಮೇಶ್,ಮಂಜುನಾಥರೆಡ್ಡಿ, ಎಸ್. ಶಶಿಕಿರಣ್, ನಾಗರಾಜ–ರೆಡ್ಡಿ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಮಹಿಳೆಯರ ಹಲವು ಸಮಸ್ಯೆಗಳಿಗೆ ಡಾ. ಉಷಾ ಬಿ.ಆರ್. ಅವರಿಂದ ಸಲಹೆ



ಬೆಂಗಳೂರು, ಆ. 8– ಯುಟ್ಯೂಬ್ ' ಕೇಳೇ ಗೆಳತಿ ' ಕಾರ್ಯಕ್ರಮವು ಮಹಿಳೆಯರ ಆರೋಗ್ಯ ಸಮಸ್ಯೆಗಳಿಗೆ ಮಾಹಿತಿ ಹಾಗೂ ಪರಿಹಾರಯುಕ್ತವಾಗಿದೆಮಹಿಳೆಯೊಬ್ಬಳು ತನ್ನ ಜೀವನದಲ್ಲಿ ಹದಿಹರೆಯದವಳಾಗುವುದು ಪ್ರಜನನ ಮತ್ತು ಋತುಚಕ್ರ ಬಂದ .. ಹೀಗೆ ಹಲವು ಹಂತಗಳ ಈ ಸ್ಥಿತ್ಯಂತರಗಳಲ್ಲಿ ಆಕೆಯ ದೇಹವು ಬೆಳವಣಿಗೆಗೆ ತಕ್ಕ ಪ್ರಬುದ್ಧ ಬದಲಾವಣೆಗಳನ್ನು ಕಾಣುತ್ತದೆ. ಈ ಸಂದರ್ಭದಲ್ಲಿ ಸಾಮಾನ್ಯವಾಗಿ ಮಹಿಳೆಯರ ಆರೋಗ್ಯದಲ್ಲಿ ಏರು ಪೇರಾಗುವ ಸಾಧ್ಯತೆಗಳು ಹೆಚ್ಚಿರುತ್ತದೆ.ಮಹಿಳೆಯರಿಗೆ ಆರೋಗ್ಯದ ವಿಷಯದಲ್ಲಿ ವಿಶೇಷವಾಗಿ 'ಬಯಕೆಗಳಿಂದ ಕೂಡಿದ ಹೆರಿಗೆ' ಯಂತಹ ಸನ್ನಿವೇಶಗಳಲ್ಲಿ ಕಾಡುವ ಹಲವು ಪ್ರಶ್ನೆಗಳಿಗೆ ಉತ್ತರ ನೀಡಬಲ್ಲ, ಮಹಿಳೆಯರ ಎಲ್ಲಾ ಬಗೆಯ ಸಮಸ್ಯೆಗಳಿಗೆ ಸಲಹೆ ಚಿಕಿತ್ಸೆ ನೀಡುವ ಒಬ್ಬ ನುರಿತ ಪರಿಪೂರ್ಣ ಮಹಿಳಾ ವೈದ್ಯರ ಅಗತ್ಯವಿದೆ.

ಡಾ. ಉಷಾ ಬಿ ಆರ್ ರವರು ಸರಳ, ಸ್ಪಷ್ಟ, ಸಣ್ಣ ವಿಡಿಯೋಗಳ ಮೂಲಕ ಮಹಿಳೆಯರ ಎಲ್ಲಾ ಸಮಸ್ಯೆಗಳಿಗೆ ಮಾಹಿತಿ ನೀಡಿದ್ದಾರೆ. ಇನ್ನೂ ಹಲವು ಇಂತಹ ವಿಡಿಯೊಗಳು ಬಿಡುಗಡೆಯ ಹಂತದಲ್ಲಿವೆ.' ಕೇಳೇ ಗೆಳತಿ ' ಯಲ್ಲಿ ಅತ್ಯಂತ ಮೆಚ್ಚುಗೆ ಪಡೆದ ವೀಡಿಯೋಗಳೆಂದರೆ : ಮುಟ್ಟಿನ ಸಮಯದ ಅಧಿಕ ರಕ್ತಸ್ರಾವ, ಗರ್ಭಿಣಿಯರ ಆರೈಕೆ, ಅತಿಸೂಕ್ಷ್ಮ ಹೆರಿಗೆ ಮತ್ತು ಆರೈಕೆ, ಸಂತಾನ ಪ್ರಾಪ್ತಿ, ಗರ್ಭಧಾರಣೆ ಸಮಸ್ಯೆಗಳಿಗೆ ಚಿಕಿತ್ಸೆ, ಕೋವಿಡ್ ಮತ್ತು ಹೆರಿಗೆ, ಲ್ಯಾಪರೊಸ್ಕೋಪಿ, ರಕ್ತ ಹೀನತೆ, ಪಿಸಿಓಎಸ್ , ಮೂತ್ರದ ಸೋಂಕು, Ectopic Pregnancy .. ಮುಂತಾದವು. ವೈದ್ಯಕೀಯ ಕ್ಷೇತ್ರದಲ್ಲಿ ಹತ್ತು ವರುಷಗಳಿಗೂ ಅಧಿಕ ಅನುಭವ ಹಾಗೂ ಸುಮಾರು 10,000 ಹೆರಿಗೆ ಮತ್ತು ವಿವಿಧ ಶಸ್ತ್ರ ಚಿಕಿತ್ಸೆಗಳನ್ನು ಮಾಡಿದ ನೈಪುಣ್ಯತೆ ಡಾ. ಉಷಾ ಬಿ ಆರ್ ಅವರದ್ದು. ಮಹಿಳೆರಲ್ಲಿ ಲ್ಯಾಪರೊಸ್ಕೋಪಿ, ಫರ್ಟಿಲಿಟಿಯ – ಐವಿಫ್, ಐ ಯು ಐ, ಐ ಸಿ ಯಸ್ ಐ, ಅತಿ ಸೂಕ್ಷ್ಮ ಹೆರಿಗೆ ಹಾಗೂ 3ಡಿ ಸ್ಕ್ಯಾನಿಂಗ್ ಇಂತಹ ಎಲ್ಲಾ ವಿಧಾನಗಳಲ್ಲಿ ಇವರು ಉನ್ನತ ಮಟ್ಟದ ವ್ಯಾಸಂಗ, ಪರಿಣತಿ ಹೊಂದಿದ್ದಾರೆ ಎನ್ನುವುದೇ ಹೆಮ್ಮೆಯ ವಿಷಯ.ಮಿಗಿಲಾಗಿ ಇವರು ಒಬ್ಬ ಕನ್ನಡಿಗ ಹೆಣ್ಣುಮಗಳಾಗಿರುವುದು ನಮಗೆಲ್ಲರಿಗೂ ಇವರೊಂದಿಗೆ ಆತ್ಮೀಯತೆಯನ್ನು ಹೆಚ್ಚಿಸುತ್ತದೆ.ಉಷಾ ಸ್ಪೆಷಾಲಿಟಿ ಕ್ಲಿನಿಕ್ ನಲ್ಲಿ ಡಾ ಉಷಾ ಬಿ ಆರ್ ರವರು ಇಂದಿಗೂ ಉಚಿತ ಕರೆಗಳನ್ನು ಸ್ವೀಕರಿಸಿ ಮತ್ತು ಉಚಿತ ಸಂದರ್ಶನ ಸೇವೆಗಳ ಮೂಲಕ ಅನೇಕರ ಮನೆಯ ಬೆಳಕಾಗಿದ್ದಾರೆ.

ಸಂಪರ್ಕಿಸಿ: 8884522455

# ಆಜಾದಿ ಕಾ ಅಮೃತ ಮಹೋತ್ಸವ - ಬೈಕ್ ಜಾಥಾ



ಶಿವಮೊಗ್ಗ, ಆ. 8:ಶಿವಮೊಗ್ಗ ನಗರದಲ್ಲಿ ಇಂದು ಬೆಳಿಗ್ಗೆ ಬಿಜೆಪಿ ಪಕ್ಷವು ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಬೈಕ್ ಜಾಥಾ ಹಮ್ಮಿಕೊಂಡಿತ್ತು.

ಬೈಕ್ ಜಾಥಾದಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ, ವಿಧಾನ ಪರಿಷತ್ ಶಾಸಕ ರುದ್ರೇಗೌಡ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಈ ಇಬ್ಬರು ನಾಯಕರು ಬೈಕ್ ಜಾಥಾದಲ್ಲಿ ಭಾಗವಹಿಸಿ, ಕಾರ್ಯಕರ್ತರನ್ನು ಹುರಿದುಂಬಿಸಿದರು. ಎಂ.ಆರ್.ಆರ್.ವೃತ್ತದಿಂದ ಆರಂಭವಾದ ಬೈಕ್ ಜಾಥಾವುಯ ಶಿವಮೊಗ್ಗ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ–ತು. ಕಾರ್ಯಕರ್ತರು ದೇಶಭಕ್ತಿಯ ಘೋಷಣೆಗಳನ್ನು ಕೂಗಿದರು.

# ಲೈಂಗಿಕ ಕಿರುಕುಳ ವಿರೋಧಿಸಿದ ಮಹಿಳೆಯನ್ನು ಟ್ರಕ್‌ನಿಂದ ಹೊರದಬ್ಬಿದ



ಮಥುರಾ(ಉತ್ತರ ಪ್ರದೇಶ),ಆ.8– ಲೈಂಗಿಕ ಕಿರುಕುಳವನ್ನು ವಿರೋಧಿಸಿದ ಮಹಿಳೆಯನ್ನು ಟ್ರಕ್‌ನಿಂದ ಹೊರದಬ್ಬಿರುವ ಕ್ರೂರ ಘಟನೆ ದೆಹಲಿ?ಆಗ್ರಾ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಾಚರಣೆಕೈಗೊಂಡ ಪೊಲೀಸರು ಟ್ರಕ್ ಚಾಲಕನನ್ನು ಬಂಧಿಸಿ ತೀವ್ರ ವಿಚಾರಣೆ ಕೈಗೊಂಡಿದ್ದಾರೆ.


ಫಾರ್ಮಾಸಿಟಿಕಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ 27 ವರ್ಷದ ಮಹಿಳೆಯು ಔಷಧಿ ಡೆಲಿವರಿ ಮಾಡಿದ ಬಳಿಕ ವಾಪಸ್ ತೆರಳಲು ವಾಹನಕ್ಕಾಗಿ ಕಾಯುತ್ತಾ

ಹೆದ್ದಾರಿ ಬಳಿ ನಿಂತಿದ್ದಾಗ ಲಿಫ್ಟ್ ಕೊಡುವುದಾಗಿ ಕಂಟೇನರ್ ಟ್ರಕ್ ಹತ್ತಿಸಿಕೊಂಡ ಚಾಲಕ, ದಾರಿ ಮಧ್ಯೆ ಆಕೆಗೆ ಲೈಂಗಿಕ ಕಿರುಕುಳ ನೀಡಲು ಮುಂದಾಗಿದ್ದಾನೆ.

ಮಹಿಳೆ ಪ್ರತಿರೋಧ ಒಡ್ಡಿದಾಗ ಕಬ್ಬಿಣದ ಸರಳಿನಿಂದ ಹಲ್ಲೆ ನಡೆಸಿ, ಟ್ರಕ್‌ನಿಂದ ಹೊರಗೆ ದಬ್ಬಿದ್ದಾನೆ ಎಂದು ಎಸ್‌ಪಿ ಶ್ರೀಷ್ ಚಂದ್ರ ಹೇಳಿದ್ದಾರೆ.ಟ್ರಕ್ ಹತ್ತಿಸಿಕೊಂಡ ಕೆಲವೇ ನಿಮಿಷಗಳಲ್ಲಿ ಚಾಲಕ ಕಿರುಕುಳ ನೀಡಲು ಆರಂಭಿಸಿದ್ದಾನೆ. ಅದನ್ನು ವಿರೋಧಿಸಿದ ಮಹಿಳೆ ನೆರವಿಗಾಗಿ ಕೂಗಿಕೊಂಡಿದ್ದಾಳೆ.

ಇದನ್ನು ಗಮನಿಸಿದ ಇತರ ವಾಹನಗಳ ಚಾಲಕರು ಟ್ರಕ್ ಅನ್ನು ಹಿಂಬಾಲಿಸಿದ್ದಾರೆ. ಇದ–ರಿಂದ ವಿಚಲಿತನಾದ ಟ್ರಕ್ ಚಾಲಕ, ಮಹಿಳೆಯ ತಲೆಗೆ ರಾಡ್‌ನಿಂದ ಹೊಡೆದು,ಚಲಿಸುತ್ತಿದ್ದ ಟ್ರಕ್‌ನಿಂದ ಹೊರದಬ್ಬಿದ್ದಾನೆ ಎಂದೂ ಎಸ್‌ಪಿ ಹೇಳಿದ್ದಾರೆ.ಸ್ಥಳೀಯರು ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಬಳಿಕ, ಟ್ರಕ್ ಅನ್ನು ಪತ್ತೆ ಮಾಡಿ, ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಕಂಟೇನರ್ ಟ್ರಕ್, ನೋಯ್ಡಾದಿಂದ ತಮಿಳುನಾಡಿಗೆ ಮೋಟಾರ್‌ಸೈಕಲ್ ಕೊಂಡೊಯ್ಯುತ್ತಿದ್ದು ಸಂತ್ರಸ್ತೆ ತಂದೆಯ ದೂರಿನ ಮೇರೆಗೆ ಟ್ರಕ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ಸ್ಮಾರ್ಟ್ ಸಿಟಿ ಕಾಮಗಾರಿ ಭಾರಿ ಅವ್ಯವಹಾರ ಆರೋಪ



ಶಿವಮೊಗ್ಗ, ಆ. 8: ನಗರದಲ್ಲಿ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಕಾಮಗಾರಿಗಳು ಸಂಪೂರ್ಣ ಕಳಪೆಯಿಂದ ಕೂಡಿದ್ದು, ನೂರಾರು ಕೋಟಿ ರೂ.ಅವ್ಯವಹಾರ ನಡೆದಿದೆ ಎಂದು ಕಾಂಗ್ರೆಸ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ದೇವೇಂದ್ರಪ್ಪ ಆರೋಪಿಸಿದ್ದಾರೆ. ಶಿವಮೊಗ್ಗ ನಗರದ ಮೀಡಿಯಾ ಹೌಸ್ ನಲ್ಲಿ ಸೋಮವಾರ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಸುಮಾರು ಸಾವಿರ ಕೋಟಿ ರೂ ವೆಚ್ಚದಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ನಗರದ ವಿವಿಧಡೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಆದರೆ ಬಹುತೇಕ ಕಾಮಗಾರಿಗಳು ಗುಣಮಟ್ಟದಿಂದ ಕೂಡಿಲ್ಲ. ಅವ್ಯವಸ್ಥೆಯ ಆಗರವಾಗಿ ನಡೆಯುತ್ತಿದೆ. ಹೇಳುವವರು, ಕೇಳುವವರು ಯಾರು ಇಲ್ಲದಂತಾಗಿದೆ ಎಂದು ದೇವೇಂದ್ರಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಜಿಲ್ಲಾಧಿಕಾರಿಗಳು ಸ್ಮಾರ್ಟ್ ಸಿಟಿ ವತಿಯಿಂದ ನಡೆಸಲಾಗಿರುವ ಕಾಮಗಾರಿಗಳ ಗುಣಮಟ್ಟ ಪರೀಕ್ಷೆಗೆ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಈ ಮೂಲಕ ಸಾರ್ವಜನಿಕರ ತೆರಿಗೆ ಹಣ ಅಪವ್ಯಯ ಮಾಡಿದವರ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಜರುಗಿಸಬೇಕು.

ಜಿಲ್ಲಾಡಳಿತ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಲಾಗುವುದು. ಸಂಘಟನೆಯ ವತಿಯಿಂದ ಉಗ್ರ ಸ್ವರೂಪದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.ಗೋಷ್ಠಿಯಲ್ಲಿ ವಿನಯ್ ತಾಂಡ್ಲೆ, ಬಾಲಾಜಿ, ಕವಿತಾ, ಸ್ಟೆಲ್ಲಾ ಮಾರ್ಟಿನ್, ಬಾಲಾಜಿ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

# ಒಂದು ಲಕ್ಷ ಚಿಕಿತ್ಸೆ ವೆಚ್ಚ ಕಡಿತಗೊಳಿಸಿದ ಡಿಸಿ



ಶಿವಮೊಗ್ಗ,ಆ.8: ಶಿವಮೊಗ್ಗ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿರುವ ಸಾಗರತಾಲೂಕಿನಬಡ ರೋಗಿಯೋರ್ವರಿಗೆ, ಶಿವಮೊಗ್ಗದ ಅಪರ ಜಿಲ್ಲಾಧಿಕಾರಿ ಡಾ.ನಾಗೇಂದ್ರಎಫ್.ಹೊನ್ನಳ್ಳಿರವರ ಸಕಾಲಿಕ ಪ್ರಯತ್ನದ ಫಲವಾಗಿ ಆಸ್ಪತ್ರೆ ಆಡಳಿತ ಮಂಡಳಿಯು ಸುಮಾರು 1 ಲಕ್ಷ ರೂ.ಗಳಷ್ಟು ಚಿಕಿತ್ಸಾ ವೆಚ್ಚ ಕಡಿತಗೊಳಿಸಿದ ಘಟನೆ ನಡೆದಿದೆ.

ತೀವ್ರಸ್ವರೂಪದ ಅನಾರೋಗ್ಯದಿಂದ ಬಳಲುತ್ತಿದ್ದ ಸಾಗರ ತಾಲೂಕಿನ ವ್ಯಕ್ತಿಯೋರ್ವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತುರ್ತು ಚಿಕಿತ್ಸಾ ಘಟಕದಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಆದರೆ ಆಸ್ಪತ್ರೆಯ ಚಿಕಿತ್ಸಾ ವೆಚ್ಚ ಭರಿಸಲಾಗದೆ ರೋಗಿ ಕಡೆಯುವರು ಸಂಕಷ್ಟ ಪಡುತ್ತಿದ್ದರು.

ನಾಗರೀಕರೋರ್ವರು ನೀಡಿದ ಸಲಹೆಯಂತೆ, ರೋಗಿಯ ಕಡೆಯವರು ಅಪರ ಡಿಸಿ ನಾಗೇಂದ್ರ ಎಫ್.ಹೊನ್ನಳ್ಳಿರವರ ಮೊಬೈಲ್ ಗೆ ಕರೆ ಮಾಡಿ ಅಳಲು ತೋಡಿಕೊಂಡಿ–ದ್ದರು. ಚಿಕಿತ್ಸಾ ವೆಚ್ಚ ಭರಿಸಲು ಆಗದಿರುವ ಕುರಿತಂತೆ ಅಳಲು ತೋಡಿಕೊಂಡಿದ್ದರು.

ಇದಕ್ಕೆ ತ್ವರಿತಗತಿಯಲ್ಲಿ ಸ್ಪಂದಿಸಿದ ಎಡಿಸಿ, ಆಸ್ಪತ್ರೆಯ ಆಡಳಿತ ಮಂಡಳಿಯವರೊಂದಿಗೆ ನಿರಂತರವಾಗಿ ಮಾತನಾಡಿದ್ದರು. ಬಡ ರೋಗಿಗೆ ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದ್ದರು.ಎಡಿಸಿಯವರ ಪ್ರಯತ್ನದ ಫಲವಾಗಿ ಸುಮಾರು 1 ಲಕ್ಷ ರೂ.ಗಳಷ್ಟು ಚಿಕಿತ್ಸಾ ವೆಚ್ಚವನ್ನು ಆಸ್ಪತ್ರೆ ಆಡಳಿತ ಮಂಡಳಿ ಕಡಿತಗೊಳಿಸಿದೆ. ಎಡಿಸಿಯವರ ಸಕಾಲಿಕ ಕ್ರಮದಿಂದ ಬಡ ರೋಗಿ ಕುಟುಂಬದವರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

# ಜಲಾಶಯದ ಒಳ ಹರಿವು ಹೆಚ್ಚಳ

ತುಮಕೂರು, ಆ. 8– ಶಿಂಷಾ ಜಲಾನಯನ ಪ್ರದೇಶದಲ್ಲಿ ಜುಲೈ 31ರಿಂದ ಸುರಿಯುತ್ತಿರುವ ಭಾರಿ ಮಳೆಗೆ ಜಲಾಶಯದ ಒಳಹರಿವು ಹೆಚ್ಚಾಗಿದ್ದು, ಈ ಹಿನ್ನೆಲೆಯಲ್ಲಿ ಮಾರ್ಕೋನಹಳ್ಳಿ ಜಲಾಶಯದಿಂದ ಹೆಚ್ಚುವರಿ ನೀರನ್ನು ಹೊರಬಿಡುವ ಕಾರಣ ಅಣೆಕಟ್ಟೆ ಕೆಳಭಾಗದ ಮತ್ತು ನದಿ ಪಾತ್ರದ ಸುತ್ತಮುತ್ತಲಿನ ಹಳ್ಳಿಗಳ ಸಾರ್ವಜನಿಕರು ತಮ್ಮ ಜಾನುವಾರುಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳುವಂತೆ ಹೇಮಾವತಿ ನಾಲಾವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಪ್ರಸ್ತುತ ಮಾರ್ಕೋನಹಳ್ಳಿ ಜಲಾಶಯಕ್ಕೆ ಬರುವ ಒಳಹರಿವಿನ ಪ್ರಮಾಣಕ್ಕೆ ಅನುಗುಣವಾಗಿ ಶಿಂಷಾ ನದಿಗೆ ಹೆಚ್ಚುವರಿ ನೀರನ್ನು ಹೊರ ಬಿಡಲಾಗುತ್ತದೆ.

# ಯುವಕನ ಮೇಲೆ ಹಲ್ಲೆ- ಆರೋಗ್ಯ ವಿಚಾರಿಸಿದ ಸಂಸದರು



ಮಾಲೂರು,ಆ8:ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ, ನಗರಾಭಿವೃದ್ಧಿ ಸಚಿವ ಬಿ.ಎ.ಬಸವರಾಜು,ಸಂಸದ ಎಸ್. ಮುನಿಸ್ವಾಮಿ ಹಾಗೂ ಮಾಜಿ

ಶಾಸಕ ಕೆ.ಎಸ್. ಮಂಜುನಾಥ್ ಗೌಡ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅನ್ಯ ಕೋಮಿನ ಯುವಕನಿಂದ ಹಲ್ಲೆಗೆ ಒಳಗಾಗಿ ಸರ್ಕಾರಿ ಸಾರ್ವಜನಿಕ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ್ ಎಸ್‌ಎಸ್‌ನ ಜಿಲ್ಲಾ ಸಹ ಶಾರೀರಿಕ್ ಪ್ರಮುಖ ರವಿ ಮಾರ್ ಅವರ ಆರೋಗ್ಯ ವಿಚಾರಿಸಿದರು.

ರವಿಕುಮಾರ್ ತಂದೆ , ನಿವೃತ್ತ ಶಿಕ್ಷಕ ಗೋಪಾಲ್ ಮಾತನಾಡಿ, 'ಸಚಿವರೇ,ನಮಗೆ ರಕ್ಷಣೆ ಇಲ್ಲದಾಗಿದೆ. ನನ್ನ

ಮಗ ಆರ್‌ಎಸ್‌ನಲ್ಲಿ ಬಾಲ್ಯದಿಂದ ಕೆಲಸ ಮಾಡುತ್ತಿದ್ದಾನೆ. ಆತನ ಪ್ರಾಣಕ್ಕೆ ಅಪಾಯ ಬಂದಿರುವುದರಿಂದ ನಮಗೆ ಭಯವಾಗುತ್ತಿದೆ,ನನ್ನ ಮಗನಿಗೆ ಏನಾದರೂ ತೊಂದರೆ ಯಾದರೆ ನನ್ನ ಸೊಸೆ ಮತ್ತು ಮಗುವಿನ ಗತಿ ಏನು ಎಂದು

ಕೇಳಿದರು ಆಗ ಸಚಿವ ಮುನಿರತ್ನಮ್ ಭಯಪಡಬೇಡಿ, ನಿಮ್ಮ ಜೊತೆಯಲ್ಲಿ ನಾವಿದ್ದೇವೆ ಯಾವುದೇ ಕಾರಣಕ್ಕೂ ನಿಮ್ಮ ಮಗನಿಗೆ ತೊಂದರೆ ಯಾಗದಂತೆ ಪಕ್ಷ ಹಾಗೂ ಸರ್ಕಾರ ನಿಮ್ಮ ಜೊತೆ ಇದೆ ನಿಮಗೆ ರಕ್ಷಣೆ ನೀಡುವುದು ನಮ್ಮ ಜವಾಬ್ದಾರಿ ಎಂದು ಧೈರ್ಯ ತುಂಬಿದರು

ಚಿಕಿತ್ಸೆ ಪಡೆಯುತ್ತಿರುವ ರವಿಕುಮಾರ್ ಮಾತನಾಡಿ, ಹಲ್ಲೆ ಮಾಡಿದ ಯುವಕನ ಪರಿಚಯ ನನಗಿಲ್ಲ ಇಬ್ಬರು ರಸ್ತೆಯಲ್ಲಿ ಜಗಳ ವಾಡಿ ಕೊಳ್ಳುತ್ತಿದ್ದರು ಜಗಳ ಬಿಡಿಸಲು ಹೋಗಿದ್ದಕ್ಕೆ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಸಚಿವರ ಬಳಿ ಹೇಳಿದರು ಚಾ ಹಾಗೂ ಸರ್ಕಾರ ನಿಮ್ಮ ಪರವಾಗಿದೆ ನಿಮಗೆ ಹಾಗೂ ನಿಮ್ಮ ಕುಟುಂಬಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಪೊಲೀಸರು ರಕ್ಷಣೆ ನೀಡುತ್ತಾರೆ ಎಂದು ಭರವಸೆ ನೀಡಿದರು

ಆಸ್ಪತ್ರೆ ಯಿಂದ ಹೊರಗೆ ಬಂದ ಸಚಿವರನ್ನು ಆರ್ ಎಸ್ ಎಸ್ ಕಾರ್ಯಕರ್ತರು ಕಾರ್ಯ ಕರ್ತರಿಗೆ ರಕ್ಷಣೆ ಇಲ್ಲ ದಂತಾಗಿದೆ ನ್ಯಾಯ ಕೇಳಲು ಪೊಲೀಸ್ ಠಾಣೆಗೆ ಹೋದರೆ ಎಸ್ ಪಿ ಯವರು ಕಾರ್ಯ ಕರ್ತರನ್ನು ನಿಂದಿಸಿ ಹೊರಗೆ ಕಳುಹಿಸಿದರು' ಎಂದು ದೂರಿದರು.

ಈ ಬಗ್ಗೆ ನಾವು ಮಾತನಾಡುತ್ತೇವೆ' ಕಾರ್ಯ ಕರ್ತರಿಗೆ ತೊಂದರೆ ಯಾಗದಂತೆ ನೋಡಿ ಕೊಳ್ಳುತ್ತೇವೆ ಎಂದು ಹೇಳಿ ಸಚಿವರು ಹೊರಟರು.

ರವಿಕುಮಾರ್ ಅವರಿಗೆ ಧೈರ್ಯ ತುಂಬಿದ ಸಚಿವರು ರಕ್ಷಣೆಯ ಭರವಸೆ ನೀಡಿಲ್ಲವೆಂದು ಆರ್ ಎಸ್ ಎಸ್ ಕಾರ್ಯ ಕರ್ತರು ಆಕ್ರೋಶ ವ್ಯಕ್ತ ಪಡಿಸಿದರು

# ಕಾಂಗ್ರೆಸ್, ಆಪ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆ



**ಮಹದೇವಪುರ ಕ್ಷೇತ್ರದ ಮುನ್ನೆಕೊಳ್ಳಾಲು ಗ್ರಾಮದಲ್ಲಿ ರಾಜೇಶ್ ರೆಡ್ಡಿ ಸೇರಿದಂತೆ ವಿವಿಧ ಪಕ್ಷದ 100 ಕ್ಕೂ ಹೆಚ್ಚು ಮುಖಂಡರನ್ನು ಶಾಸಕ ಅರವಿಂದ ಲಿಂಬಾವಳಿ ಪಕ್ಷದ ಶಾಲು ಹಾಕಿ ಬರಮಾಡಿಕೊಂಡರು.**

ಕೆ.ಆರ್.ಪುರ,ಆ.11–ಮಹದೇವಪುರ ಕ್ಷೇತ್ರದ ಮುನ್ನೆಕೊಳ್ಳಾಲು ಗ್ರಾಮದಲ್ಲಿ ಆಮ್ ಆದ್ಮಿ, ಕಾಂಗ್ರೆಸ್ ಸೇರಿದಂತೆ ವಿವಿಧ ಪಕ್ಷದ 100 ಕ್ಕೂ ಹೆಚ್ಚು ಮುಖಂಡರನ್ನು, ಶಾಸಕ ಅರವಿಂದ ಲಿಂಬಾವಳಿ ಪಕ್ಷದ ಶಾಲು ಹಾಕಿ ಬಿಜೆಪಿಗೆ ಬರಮಾಡಿಕೊಂಡರು.

ನಂತರ ಮಾತನಾಡಿದ ಶಾಸಕ ಅರವಿಂದ ಲಿಂಬಾವಳಿ ಅವರು ಪ್ರಧಾನಮಂತ್ರಿ ನರೇಂದ್ರಮೋದಿರವರ ನೇತೃತ್ವದ ಕೇಂದ್ರಸರ್ಕಾರದ ಜನಪರ ಯೋಜನೆಗಳು, ರಾಜ್ಯ ಬಿಜೆಪಿ ಸರ್ಕಾರದ ಮತ್ತು ಮಹದೇವಪುರ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೆಚ್ಚಿ ಸೇರ್ಪಡೆಯಾಗಿದ್ದಾರೆ, ಮುಂದಿನ ದಿನಗಳಲ್ಲಿ ಎಲ್ಲರು ಒಗ್ಗಟ್ಟಾಗಿ ಪಕ್ಷ ಸಂಘಟನೆ ಮತ್ತು ಕ್ಷೇತ್ರದ ಅಭಿವೃದ್ಧಿ ಶ್ರಮಿಸುವುದಾಗಿ ತಿಳಿಸಿದರು.

ಪ್ರಧಾನಿ ಮೋದಿಯವರ ನಿರಂತರ ಕಾರ್ಯಗಳಿಂದ ಬಿಜೆಪಿ ಜನ ಮನ್ನಣೆ ಪಡೆಯುತ್ತಿದೆ, ದೇಶದ ಬಹುತೇಕ ಜನ ಬಿಜೆಪಿಯ ಕಾರ್ಯಕರ್ತರಾಗುತ್ತಿದ್ದಾರೆ. ಹೀಗಾಗಿ ವಿಶ್ವದ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ' ಎಂದು ತಿಳಿಸಿದರು.ಮಹದೇವಪುರ ಕ್ಷೇತ್ರದ ಮುನ್ನೇಕೊಳಾಲದಲ್ಲಿ ವಿವಿಧ ಪಕ್ಷದ ರಾಜೇಶ್ ರೆಡ್ಡಿ, ಪಟೇಲ್ ವಾಸು ರೆಡ್ಡಿ, ಅರುಣ್ ರೆಡ್ಡಿ, ಹರೀಶ್ ಕುಮಾರ್ ರೆಡ್ಡಿ, ನವೀನ್ ಕುಮಾರ್ ರೆಡ್ಡಿ ಸೇರಿದಂತೆ 100 ಕ್ಕೂ ಹೆಚ್ಚು ಮುಖಂಡರು ಮಂದಿ ಇಂದು ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಜಯಚಂದ್ರಾರೆಡ್ಡಿ,ರಾಜಾರೆಡ್ಡಿ,ರಾಜೇಶ್, ಲೋಕೇಶ್ ಮತ್ತಿತರರು ಇದ್ದರು



**ನಗರದಲ್ಲಿ ಇಂದು ಬೆಳಿಗ್ಗೆ ತುಂತುರು ಮಳೆಯಲ್ಲಿ ಕೊಡೆ ಹಿಡಿದು ಕಚೇರಿಗಳಿಗೆ ತೆರಳಿದ ಮಹಿಳೆಯರು.**

# ಬಿಜೆಪಿ ಕಾರ್ಯಕರ್ತನ ಅತಿಕ್ರಮ ಜಾಗ ತೆರವು



ಲಖನೌ,ಆ.8–ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ ಲೈಂಗಿಕ ದೌರ್ಜನ್ಯ ಎಸಗಿದ ಬಿಜೆಪಿ ಕಾರ್ಯಕರ್ತ ಶ್ರೀಕಾಂತ್ ತ್ಯಾಗಿ ಅವರು ಅತಿಕ್ರಮ ಮಾಡಿರುವ ಜಾಗವನ್ನು ಬುಲ್ಡೋಜರ್ ಕಾರ್ಯಾಚರಣೆ ಮೂಲಕ ತೆರವುಗೊಳಿಸಿ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಕಳೆದ ವಾರ ನೋಯ್ಡಾ ಹೌಸಿಂಗ್ ಸೊಸೈಟಿಯ ಮಹಿಳೆ ಮೇಲೆ ಹಲ್ಲೆ ನಡೆಸಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಶ್ರೀಕಾಂತ್ ಗುರಿಯಾಗಿದ್ದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಬುಲ್ಡೋಜರ್‌ಗಳೊಂದಿಗೆ ಸ್ಥಳಕ್ಕೆ ಲಗ್ಗೆ ಹಾಕಿ ನೋಯ್ಡಾ ಸೆಕ್ಟರ್ 93ರಲ್ಲಿ ಕಾರ್ಯಾಚರಣೆ ನಡೆಸಿ ಅತಿಕ್ರಮ ಜಾಗವನ್ನು ವಶಕ್ಕೆ ತೆಗೆದುಕೊಂಡರು.

ಹಲ್ಲೆಗೊಳಗಾದ ಮಹಿಳೆ ಬಿಜೆಪಿ ಕಾರ್ಯಕರ್ತ ಜಾಗವನ್ನು ಅತಿಕ್ರಮಣ ಮಾಡಿಕೊಂಡಿದ್ದಾನೆ ಎಂದು ಆರೋಪಿಸಲಾಗಿರುವ ವಿಡೀಯೋ ತುಣುಕು ವೈರಲ್ ಆಗಿತ್ತು.

ಶ್ರೀಕಾಂತ್ ನಿರ್ಮಿಸಿದ್ದ ಅತಿಕ್ರಮಣ ಕಟ್ಟಡವನ್ನು ಬುಲ್ಡೋಜರ್ ಮೂಲಕ ಕೆಡವಿ ಹಾಕುತ್ತಿದ್ದಂತೆ ಸ್ಥಳದಲ್ಲೇ ಜಮಾಯಿಸಿದ್ದ ನೊಯ್ಡಾ ಹೌಸಿಂಗ್ ಸೊಸೈಟಿಯ ಸಿಬ್ಬಂದಿ ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು.

ಸೊಸೈಟಿಗೆ ಸೇರಿದ ಉದ್ಯಾನವನವನ್ನು ಶ್ರೀಕಾಂತ್ ಅತಿಕ್ರಮಣ ಮಾಡಿಕೊಂಡಿದ್ದು, ಸ್ಥಳೀಯ ನಿವಾಸಿಗಳಿಗೆ ಅನಾನುಕೂಲವಾಗಿತ್ತು.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**IN THE COURT OF THE MOTOR ACCIDENTS CLAIMS TRIBUNAL (SPECIAL SUB COURT) DHARMAPURI**

MCOP . No. 109/2022

**Chinnasamy** S/o Munusamy D.No:2/153-1, Thinnappatti Village, Erupalli Post, Pennagaram Taluk, Dharmapuri District .... *Petitioner*

V/s

**S. Sathyapriya,** W/o Sellapandiyan D.No 10 15. Kathalipalaya, 17th Main Road, 6th Block, Koramangala , Namakkal, Bangalore, Karnataka - 560096 . *1st Respondent*

**NOTICE**

The above named petitioner has filed the above petition for compensation against you (1st respondent) and another . The case is posted on 05-09-2022 for your appearance . You are hereby directed to appear in person or through pleader on 05-09-2022 at 10.30 A.M. before the above Court . failing which the above petition will be decreed exparte in your absence .

(By Court order)

**Mr. S. Kalyanasundaram,**
B.A. , B.L. Advocate ,
Enrolment No. 1332/2004,
No. 40, K.V. Complex, Chettyram Street, Dharmapuri - 636701
**Cell 9894474084**

## Xchanging Solutions Limited

**Registered Office :** Kalyani Tech Park - Survey No 1, 6 & 24
Kundanhalli Village, K R Puram Hobli, Bengaluru – 560 066, Karnataka, India
**CIN:** L72200KA2002PLC030072
**Tel.:** +91 80 4364 0000
**Email:** compliance@xchanging.com **Website:** www.dxc.com

DXC TECHNOLOGY

**Extract of unaudited consolidated financial results for the quarter ended June 30, 2022**

(Rs. in lakhs except for per share data)

| Particulars | Quarter ended 30/06/2022 | Quarter ended 31/03/2022 | Corresponding quarter ended 30/06/2021 | Year ended 31/03/2022 |
|---|---|---|---|---|
| | (Unaudited) | (Refer note 1) | (Unaudited) | (Audited) |
| Total income from operations | 4,581 | 4,708 | 4,684 | 18,284 |
| Net Profit for the period before tax | 1,653 | 1,593 | 1,456 | 6,087 |
| Net Profit for the period after tax | 1,496 | 1,107 | 1,062 | 5,257 |
| Total Comprehensive Income (After tax) for the period | 2,183 | 1,404 | 1,367 | 5,776 |
| Paid up equity share capital (Face value per share Rs 10/-, fully paid) | 11,140 | 11,140 | 11,140 | 11,140 |
| Other Equity (excluding Revaluation Reserve) | - | - | - | 50,205 |
| Earnings per Equity Share (Face value of Rs.10 each) (not annualised for the quarters) | | | | |
| Basic- In Rs. | 1.34 | 0.99 | 0.95 | 4.72 |
| Diluted- In Rs. | 1.34 | 0.99 | 0.95 | 4.72 |

**Key numbers of Standalone Financial Results** (Rs. in lakhs)

| Particulars | Quarter ended 30/06/2022 | Quarter ended 31/03/2022 | Corresponding quarter ended 30/06/2021 | Year ended 31/03/2022 |
|---|---|---|---|---|
| | (Unaudited) | (Refer note 1) | (Unaudited) | (Audited) |
| Total income from operations | 1,192 | 1,328 | 1,181 | 5,218 |
| Net Profit for the period before tax | 506 | 519 | 441 | 2,281 |
| Net Profit for the period after tax | 629 | 331 | 278 | 2,219 |
| Total Comprehensive Income (After tax) for the period | 639 | 325 | 263 | 2,199 |

**Notes:**

1.The figures for the quarter ended March 31, 2022 are the balancing figures between audited figures of the full financial year ended March 31, 2022 and the published year to date figures upto the third quarter ended December 31, 2021, wherein limited review was performed by the statutory auditors of the Company. The statutory auditors have performed a limited review on the results for the quarter ended March 31, 2022.

2.The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the Stock Exchange websites, www.nseindia.com and www.bseindia.com and on the Company's website www.dxc.com/in/en/about-us/xchanging-solutions-limited-investor-relations.

**By Order of the Board of Directors**

**Place: Mumbai**
**Date : August 6, 2022**

**Nachiket Vibhakar Sukhtankar**
**Managing Director and Chief Executive Officer**
**DIN: 08778377**

